ಅನುಬಂಧ-1

ಮೈಸೂರು ಜಿಲ್ಲೆಯಲ್ಲಿ ಸ್ವಚ್ಛಗ್ರಾಮ ಯೋಜನೆಯಡಿ ತೆಗೆದುಕೊಳ್ಳಲಾದ ಗ್ರಾಮಗಳ ತಾಲ್ಲೂಕುವಾರು ವಿವರಗಳು

ಕ್ರಮ ಸಂಖ್ಯೆ	ತಾಲ್ಲೂಕು	ಗ್ರಾಮಗಳ ಸಂಖ್ಯೆ
1	ಮೈಸೂರು	7
2	ಟಿ. ನರಸೀಪುರ	7
3	ನಂಜನಗೂಡು	6
4	ಹುಣಸೂರು	12
5	ಕೆ.ಆರ್. ನಗರ	6
6	ಪಿರಿಯಾಪಟ್ಟಣ	5
7	ಹೆಚ್.ಡಿ. ಕೋಟೆ	10
	ಒಟ್ಟು	53

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸ್ವಚ್ಛಗ್ರಾಮ ಕಾಮಗಾರಿಗಳ ಹಂತದ ವಿವರ

ಕ್ರಮ ಸಂಖ್ಯೆ	ಗ್ರಾಮ	ಕಾಮಗಾರಿಯ ಹಂತ
1	ಸತ್ತೇಗಾಲ	ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದ್ದು ಕಾಮಗಾರಿ ಪ್ರಾರಂಭಿಸಲಾಗಿದೆ.
2	ಜಿ. ಬಸವಹಳ್ಳಿ	ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದ್ದು ಕಾಮಗಾರಿ ಪ್ರಾರಂಭಿಸಲಾಗಿದೆ.
3	ವಡ್ಡರಹಳ್ಳಿ	ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದ್ದು ಕಾಮಗಾರಿ ಪ್ರಾರಂಭಿಸಲಾಗಿದೆ.
4	ಆವರ್ತಿ	ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದ್ದು ಕಾಮಗಾರಿ ಪ್ರಾರಂಭಿಸಲಾಗಿದೆ.
5	ಶಾನುಭೋಗನಹಳ್ಳಿ	ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿದೆ.

ಪಿರಿಯಾಪಟ್ಟಣ ಪ್ರಥಮ ದರ್ಜೆ ಕಾಲೇಜು ಕಟ್ಟಡ

1176 (1385) ಶ್ರೀ ಬಸವರಾಜು ಹೆಚ್.ಸಿ (ಪಿರಿಯಾಪಟ್ಟಣ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣದ ಪ್ರಥಮ ದರ್ಜೆ ಕಾಲೇಜನ್ನು ಪ್ರಾಥಮಿಕ ಶಾಲಾ ಕಟ್ಟಡದಲ್ಲಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪಿರಿಯಾಪಟ್ಟಣ ನಗರದಲ್ಲಿರುವ ಪ್ರಥಮ ದರ್ಜೆ ಕಾಲೇಜು ಕಟ್ಟಡದ ಪ್ರಾರಂಭಯಾವಾಗ ಮಾಡಲಾಯಿತು;

ಇ) ಸದರಿ ಕಟ್ಟಡದ ಕಾಮಗಾರಿಯು ವಿಳಂಬವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹುಡ್ಕೋ ವತಿಯಿಂದ 39 ಲಕ್ಷ ರೂ.ಗಳ ಹೆಚ್ಚುವರಿ ಕೊಠಡಿಗಳಿಗಾಗಿ ಮಂಜೂರಾಗಿರುವುದಾಗಿ ತಿಳಿದಿದ್ದು ಅನುದಾನವನ್ನು ಸಂಬಂಧ ಪಟ್ಟವರಿಗೆ ಬಿಡುಗಡೆ ಮಾಡಲಾಗಿದೆಯೇ;

ಉ) ಹೆಚ್ಚುವರಿ ಅನುದಾನದ ಹಣ ಬಿಡುಗಡೆ ಮಾಡಲಾಗಿದ್ದಲ್ಲಿ ಕಾಮಗಾರಿ ಎಂದಿನಿಂದ ಮಾಡಲಾಗುವುದು;

ಊ) ಹಾಲಿ ಇರುವ ಕೊಠಡಿಗಳಲ್ಲಿ ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಕಾಲೇಜನ್ನು ಸ್ಥಳಾಂತರಿಸಲು ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಡಾ।। ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು

ಆ) 1993-94ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು.

ಇ) ಹೌದು

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಊ) ಲೋಕೋಪಯೋಗಿ ಇಲಾಖೆಯಿಂದ ನಿರ್ಮಾಣವಾಗುತ್ತಿರುವ ಕಟ್ಟಡ ಕಾಮಗಾರಿಯ ಪ್ರಗತಿಯಲ್ಲಿರುತ್ತದೆ. ಕಾಮಗಾರಿಯು ಪೂರ್ಣಗೊಂಡು ಇಲಾಖೆಗೆ ಕಟ್ಟಡವನ್ನು ಹಸ್ತಾಂತರಿಸಿದ ನಂತರ ಕಾಲೇಜನ್ನು ಸ್ಥಳಾಂತರಿಸಲಾಗುವುದು.

ಪಿರಿಯಾಪಟ್ಟಣ ಕ್ಷೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದು

1177 (1388) ಶ್ರೀ ಬಸವರಾಜು ಹೆಚ್.ಸಿ (ಪಿರಿಯಾಪಟ್ಟಣ) : ಮಾನ್ಯ ಆರ್ಯೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದ ಬೆಟ್ಟದಪುರ ಹಾಗೂ ಕೆ.ಆರ್. ನಗರ ತಾಲ್ಲೂಕಿನ ಚಂಚನಕಟ್ಟೆ ಹೋಬಳಿ ಹೊಸೂರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸಲ್ಲಿಸಲಾಗಿದೆಯೇ;

ಆ) ಇದ್ದಲ್ಲಿ ಮಂಜೂರಾತಿಗೆ ಯಾವ ಕ್ರಮವನ್ನು ಸರ್ಕಾರ ತೆಗೆದು ಕೊಂಡಿದೆ;

ಇ) ಈ ಸೌಲಭ್ಯವನ್ನು ಎಂದಿನಿಂದ ಒದಗಿಸಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಪಿರಿಯಾಪಟ್ಟಣ ಸಾರ್ವಜನಿಕ ಆಸ್ಪತ್ರೆ ಮೇಲ್ದರ್ಜೆ ಗೇರಿಸುವುದು

1178 (1389) ಶ್ರೀ ಬಸವರಾಜು ಹೆಚ್.ಸಿ (ಪಿರಿಯಾಪಟ್ಟಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣದ ನಗರದಲ್ಲಿರುವ ಸಾರ್ವಜನಿಕ ಆಸ್ಪತ್ರೆಯು ಎಷ್ಟು ಹಾಸಿಗೆಗಳ ಆಸ್ಪತ್ರೆಯಾಗಿದೆ; ಮೇಲ್ದರ್ಜೆಗೇರಿಸದಿರಲು ಕಾರಣವೇನು;

ಆ) ತಾಲ್ಲೂಕು ಕೇಂದ್ರದಲ್ಲಿರುವ ಈ ಸಾರ್ವಜನಿಕ ಆಸ್ಪತ್ರೆಯಲ್ಲಿ ಬರುವ ರೋಗಿಗಳ ಸಂಖ್ಯೆ ಹೆಚ್ಚಾಗಿದ್ದು, ಅದನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಇದ್ದಲ್ಲಿ, ಎಷ್ಟು ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗುವುದು;